# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ಸಾ.ಆ.ವಿ/ವಿ.ಸ.7/2008-09 ದಿನಾಂಕ:19-01-2009

## -:: ವಿಶೇಷ ಸಭೆ ನಡವಳಿಕೆಗಳು ::-

ದಿನಾಂಕ:19-01-2009ರಂದು ಸೋಮವಾರ ಬೆಳಿಗ್ಗೆ 11.00ಗಂಟೆಗೆ ನಗರಸಭೆಯ ಸಭಾಂಗಣದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರಾದ **ಶ್ರೀ ಜಿ.ರಾಮಕೃಷ್ಣ** ರವರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯಲ್ಲಿ ನಗರಸಭಾ ಉಪಾಧ್ಯಕ್ಷರು ಮತ್ತು ನಗರಸಭೆಯ ಎಲ್ಲಾ ಸದಸ್ಯರುಗಳು ಸೇರಿ ತೆಗೆದುಕೊಂಡ ನಿರ್ಣಯಗಳು:-

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ:**

| ಸದಸ್ಯರುಗಳು | ಹಾಜರಿ | ಗೈರು ಹಾಜರಿ | ಒಟ್ಟು |
|---|---|---|---|
| | 31 | 31 | 31 |

ಮೊದಲಿಗೆ ನಗರಸಭೆಯ ಪೌರಾಯುಕ್ತರಾದ **ಶ್ರೀ ಎಸ್.ಜಿ.ರಾಜಶೇಖರ್‌ರವರು** ಸಭೆಯನ್ನು ಉದ್ದೇಶಿಸಿ ಮಾತನಾಡಿ, ನಗರಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಗರಸಭೆಯ ಎಲ್ಲಾ ಸದಸ್ಯರವರಿಗೂ ಸಭೆಯಲ್ಲಿ ಸ್ವಾಗತವನ್ನು ಕೋರಿದರು, ಹಾಗೂ ಈ ಸಭೆಗೆ ಲೋಕೋಪಯೋಗಿ ಇಲಾಖೆ, ದೊಡ್ಡಬಳ್ಳಾಪುರ ವತಿಯಿಂದ ಶ್ರೀ ಎನ್.ಪಿ.ರಾಮಚಂದ್ರ, ಸಹಾಯಕ ಕಾರ್ಯಪಾಲಕ ಅಭಿಯಂತರರವರು, ಹಾಗೂ ಶ್ರೀ ಎನ್.ಕೃಷ್ಣಪ್ಪ, ಕಿರಿಯ ಅಭಿಯಂತರರು ಸಭೆಗೆ ಹಾಜರಾಗಿದ್ದು, ಇವರಿಗೂ ಸಹ ಸ್ವಾಗತವನ್ನು ಬಯಸುತ್ತಾ, ನಂತರ ಸಭೆಯನ್ನು ಪ್ರಾರಂಭಿಸಲು ಮಾನ್ಯ ಅಧ್ಯಕ್ಷರ ಅನುಮತಿಯನ್ನು ಕೋರಿದರು.

ಮಾನ್ಯ ಅಧ್ಯಕ್ಷರವರು ಸಭೆಗೆ ಹಾಜರಿದ್ದ ಎಲ್ಲಾ ನಗರಸಭಾ ಸದಸ್ಯರುಗಳಿಗೆ ಸ್ವಾಗತವನ್ನು ಭಯಸಿ ಸಭೆಯನ್ನು ಪ್ರಾರಂಭಿಸಲು ಅನುಮತಿ ನೀಡಿದರು.

**ವಿಷಯ ಸಂಖ್ಯೆ:1**

ನಗರಸಭಾ ವ್ಯಾಪ್ತಿಯಲ್ಲಿ ತುಂಬಾ ಕಿರಿದಾದ ರಸ್ತೆಗಳಿಂದ ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರಕ್ಕೆ ಅಡೆತಡೆಗಳು ಉಂಟಾಗುವುದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ರಾಷ್ಟ್ರೀಯ ಹೆದ್ದಾರಿ ಮತ್ತು ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ಹಾಗೂ ನಗರಸಭಾ ವ್ಯಾಪ್ತಿಯಲ್ಲಿ ಬರುವ ಪ್ರಮುಖ ರಸ್ತೆಗಳನ್ನು ಅಗಲೀಕರಣ ಮಾಡುವ ವಿಚಾರ.

**ತೀರ್ಮಾನ ಸಂಖ್ಯೆ:1**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ದಿನಾಂಕ:24-11-2008ರ ಮಾನ್ಯ ಜಿಲ್ಲಾಧಿಕಾರಿಗಳವರ ಪತ್ರದಲ್ಲಿ ತಿಳಿಸಿರುವಂತೆ ನಗರಸಭೆಯ ಪೌರಾಯುಕ್ತರು ಹಾಗೂ ಲೋಕೋಪಯೋಗಿ ಇಲಾಖೆಯವರು ರಸ್ತೆಯ ಅಗಲೀಕರಣದ ಕಾರ್ಯದಲ್ಲಿ ಜಂಟಿಯಾಗಿ ರಸ್ತೆ ಒತ್ತುವರಿಯಾಗಿರುವಂತಹ ಕಟ್ಟಡಗಳನ್ನು ಸೂಕ್ತ ಬಣ್ಣದಿಂದ ಗುರ್ತಿಸಿ, ವರದಿ ಸಲ್ಲಿಸಲು ಸೂಚಿಸಿರುತ್ತಾರೆಂಬುದಾಗಿ ಪೌರಾಯುಕ್ತರು ಸಭೆಯಲ್ಲಿ ವಿವರಿಸಿದಾಗ, ಈ ಬಗ್ಗೆ ಕೆಲವು ಸದಸ್ಯರು ವಿರೋಧವನ್ನು ವ್ಯಕ್ತಪಡಿಸಿದರು. ನಂತರ ದೊಡ್ಡಬಳ್ಳಾಪುರ ನಗರವು ಕೈಗಾರಿಕಾ ಹೊಸ ಹತ್ತು ಪ್ರದೇಶವಾಗಿ ನಗರೀಕರಣದತ್ತ ಸಾಗುತ್ತಿರುವುದರಿಂದ ನಗರದ ಸರ್ವೋತಮುಖ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ನಗರದ ರಸ್ತೆಗಳು ಕಿರಿದಾಗಿರುವುದರಿಂದ ಸಾರ್ವಜನಿಕರು ಹಾಗೂ ವಾಹನಗಳ ಸಂಚಾರಕ್ಕೆ ತುಂಬಾ ತೊಂದರೆಯಾಗುವುದರಿಂದ ಎಲ್ಲಾ ಸದಸ್ಯರುಗಳು ರಸ್ತೆಯ ಅಗಲೀಕರಣಕ್ಕೆ ಒಮ್ಮತವನ್ನು ವ್ಯಕ್ತಪಡಿಸುವಂತೆ ಟಿ.ಎನ್.ಪ್ರಭುದೇವ್‌ರವರು ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ಮಂಡಿಸಿದರು.

-2-

ಇದಕ್ಕೆ ಮಾನ್ಯ ನಗರಸಭಾ ಉಪಾಧ್ಯಕ್ಷರು ಪೂರ್ಣ ವಿರೋಧವನ್ನು ವ್ಯಕ್ತಪಡಿಸಿ, ರಸ್ತೆ ಅಗಲೀಕರಣ ಆದಲ್ಲಿ ಜನರಿಗೆ ತೊಂದರೆಯುಂಟಾಗುತ್ತದೆ ಎಂಬುದಾಗಿ ತಮ್ಮ ಅಭಿಪ್ರಾಯವನ್ನು ಸಭೆಯಲ್ಲಿ ವ್ಯಕ್ತಪಡಿಸಿದರು. ನಂತರ ಉಳಿದೆಲ್ಲಾ ಸದಸ್ಯರು ರಸ್ತೆಯ ಅಗಲೀಕರಣಕ್ಕೆ ಒಮ್ಮತವನ್ನು ವ್ಯಕ್ತಪಡಿಸಿ ರಸ್ತೆಯ ಅಗಲೀಕರಣ ವೇಳೆಯಲ್ಲಿ ನಷ್ಟಕ್ಕೆ ಒಳಗಾದ ಫಲಾನುಭವಿಗಳಿಗೆ ಸೂಕ್ತ ಪರಿಹಾರವನ್ನು ನೀಡಿದಲ್ಲಿ ಮಾತ್ರ ರಸ್ತೆಯ ಅಗಲೀಕರಣಕ್ಕೆ ನಮ್ಮ ಒಮ್ಮತವಿರುತ್ತದೆ ಎಂಬುದಾಗಿ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿ, ಈ ಕೆಳಕಂಡ ರಸ್ತೆಗಳಿಗೆ ಅಗಲೀಕರಣ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

1) **<u>ಕೊಂಗಾಡಿಯಪ್ಪ ಮುಖ್ಯ ರಸ್ತೆ</u>**

ಕೋರ್ಟ್ ರಸ್ತೆಯಿಂದ ಪ್ರಾರಂಭಗೊಂಡು ತೇರಿನಬೀದಿ ರಸ್ತೆಗೆ ಅಂತ್ಯಗೊಳ್ಳುತ್ತದೆ.

ಉದ್ದ – 1.23ಕಿ.ಮೀ. ಅಗಲ – 5.50ಮೀ

2) **<u>ಗಾಣಿಗರಪೇಟೆ ರಸ್ತೆ</u>**

ತಾಲ್ಲೂಕು ಕಛೇರಿ ರಸ್ತೆಯಿಂದ ಪ್ರಾರಂಭಗೊಂಡು ಮುಕ್ತಾಂಬಿಕ ರಸ್ತೆಗೆ ಅಂತ್ಯಗೊಳ್ಳುತ್ತದೆ.

ಉದ್ದ – 0.22ಕಿ.ಮೀ. ಅಗಲ – 5.00ಮೀ.

3) **<u>ಕೋಟೆ ರಸ್ತೆ</u>**

ಮಾರ್ಕೆಟ್ ರಸ್ತೆಯಿಂದ ಪ್ರಾರಂಭಗೊಂಡು ಟ್ಯಾಂಕ್ ರಸ್ತೆಗೆ ಅಂತ್ಯಗೊಳ್ಳುತ್ತದೆ.

ಉದ್ದ – 0.63ಕಿ.ಮೀ. ಅಗಲ – 5.00ಮೀ.

4) **<u>ತಾಲ್ಲೂಕು ಕಛೇರಿ ರಸ್ತೆ</u>**

ಕೊಂಗಾಡಿಯಪ್ಪ ಕಾಲೇಜು ರಸ್ತೆಯಿಂದ ಪ್ರಾರಂಭಗೊಂಡು 'ಡಿ' ಕ್ರಾಸ್ ರಸ್ತೆಗೆ ಅಂತ್ಯಗೊಳ್ಳುತ್ತದೆ.

ಉದ್ದ – 1.00ಕಿ.ಮೀ. ಅಗಲ – 5.75ಮೀ.

5) **<u>ಮಾರ್ಕೆಟ್ ರಸ್ತೆ</u>**

ಕೊಂಗಾಡಿಯಪ್ಪ ಮುಖ್ಯ ರಸ್ತೆಯಿಂದ ಪ್ರಾರಂಭಗೊಂಡು ಬಿ.ಎಂ.ಶ್ರೀ ರಸ್ತೆಗೆ ಅಂತ್ಯಗೊಳ್ಳುತ್ತದೆ.

ಉದ್ದ – 0.45ಕಿ.ಮೀ. ಅಗಲ – 6.00ಮೀ.

6) **<u>ಅ.ನ.ಕೃಷ್ಣರಾವ್ ರಸ್ತೆ</u>**

ಕುಚ್ಚಪ್ಪಪೇಟೆ ಮುಖ್ಯ_ರಸ್ತೆಯಿಂದ ಪ್ರಾರಂಭಗೊಂಡು ಕೊಂಗಾಡಿಯಪ್ಪ ಕಾಲೇಜು ರಸ್ತೆಗೆ ಅಂತ್ಯಗೊಳ್ಳುತ್ತದೆ.

ಉದ್ದ – 0.66ಕಿ.ಮೀ. ಅಗಲ – 5.00ಮೀ.

7) **<u>ಕಿತ್ತೂರು ರಾಣಿ ಚೆನ್ನಮ್ಮ ರಸ್ತೆ</u>**

ಕೊಂಗಾಡಿಯಪ್ಪ ಕಾಲೇಜು ರಸ್ತೆಯಿಂದ ಪ್ರಾರಂಭಗೊಂಡು ಕುಚ್ಚಪ್ಪಪೇಟೆ ಮುಖ್ಯ_ರಸ್ತೆಗೆ ಅಂತ್ಯಗೊಳ್ಳುತ್ತದೆ.

ಉದ್ದ – 1.00ಕಿ.ಮೀ. ಅಗಲ – 5.75ಮೀ.

8) **<u>ಕನಕದಾಸ ರಸ್ತೆ</u>**

ಕೊಂಗಾಡಿಯಪ್ಪ ಕಾಲೇಜು ರಸ್ತೆಯಿಂದ ಪ್ರಾರಂಭಗೊಂಡು ಕುಚ್ಚಪ್ಪಪೇಟೆ ಮುಖ್ಯ_ರಸ್ತೆಗೆ ಅಂತ್ಯಗೊಳ್ಳುತ್ತದೆ.

ಉದ್ದ – 0.53ಕಿ.ಮೀ. ಅಗಲ – 5.00ಮೀ.

ಸಹಿ:-
(ಜಿ.ರಾಮಕೃಷ್ಣ)
ಅಧ್ಯಕ್ಷರು,
ನಗರಸಭೆ, ದೊಡ್ಡಬಳ್ಳಾಪುರ.

"ನಕಲು ಪ್ರತಿ"

ಪೌರಾಯುಕ್ತರು,
ನಗರಸಭೆ, ದೊಡ್ಡಬಳ್ಳಾಪುರ.